# ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

## ವಿಷಯದ ಸಂಖ್ಯೆ: 561/2009-10

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಲಕ್ಕಸಂದ್ರ ಹಳೆಯ ಮಾರುಕಟ್ಟೆಯಿದ್ದು, ಶಿಥಿಲಾವಾಸ್ಥೆಯಲ್ಲಿ ಇರುತ್ತದೆ. ಸದರಿ ಪ್ರದೇಶವು ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶವಾಗಿದ್ದು, 699.08 ಚ.ಮೀ. ವಿಸ್ತೀರ್ಣವಿರುತ್ತದೆ. ಹಾಲಿ ಮಾರುಕಟ್ಟೆ ಸಂಕೀರ್ಣದಲ್ಲಿ, ಸುಮಾರು 16 ಅಂಗಡಿ ಮಳಿಗೆಗಳು ಇರುವುದಾಗಿ ಸಹಾಯಕ ಕಂದಾಯ ಅಧಿಕಾರಿ (ಮಾರುಕಟ್ಟೆ) ರವರು ವರದಿ ಮಾಡಿರುತ್ತಾರೆ. ಈ ಮಾರುಕಟ್ಟೆ ಸಂಕೀರ್ಣದಲ್ಲಿ, ತರಕಾರಿ ಅಂಗಡಿಗಳು, ಮಾಂಸದ ಅಂಗಡಿಗಳು ಹಾಗೂ ಇತರೆ ವ್ಯಾಪಾರದ ಮಳಿಗೆಗಳು ಇರುತ್ತದೆ. ಈ ಪ್ರದೇಶದ ಸುತ್ತಮುತ್ತಲಿನ ಪ್ರದೇಶದಲ್ಲಿ ಸೂಕ್ತ ಮಾರುಕಟ್ಟೆ ಇರುವುದಿಲ್ಲವಾದ್ದರಿಂದ, ಇಲ್ಲಿನ ನಿವಾಸಿಗಳ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು ಸದರಿ ಸ್ಥಳದಲ್ಲಿ ಸುಸಜ್ಜಿತ ಮಾರುಕಟ್ಟೆ, ವಾಹನ ನಿಲುಗಡೆ ಹಾಗೂ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಸದರಿ ಸ್ಥಳದಲ್ಲಿ ತರಕಾರಿ, ಹಣ್ಣು ಮತ್ತು ಇತರೇ ವಸ್ತುಗಳ ಸುಸಜ್ಜಿತ ಆಧುನಿಕ ಮಾರುಕಟ್ಟೆ, ವಾಹನ ನಿಲುಗಡೆಗಾಗಿ ತಳ ಮಹಡಿ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕಾಗಿ ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ಮಾನ್ಯ ಆಯುಕ್ತರು ನೀಡಿದ ಆದೇಶ ನೀಡಿದ್ದು, ಈ ಮೇರೆಗೆ ಮಾರುಕಟ್ಟೆ ನಿರ್ಮಾಣದ ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ಮೆ॥ಮಾನಸ ಕನ್ಸಲ್‌ಟೆಂಟ್ ರವರಿಗೆ ವಹಿಸಿದ್ದು, ದಿನಾಂಕ:18–12–2009 ರಂದು ಮಾನ್ಯ ಆಯುಕ್ತರು, ವಿಶೇಷ ಆಯುಕ್ತರು (ಯೋಜನೆ), ಪ್ರಧಾನ ಅಭಿಯಂತರರು, ಮುಖ್ಯ ಅಭಿಯಂತರರು (ಮಾರುಕಟ್ಟೆ), ಜಂಟಿ ಆಯುಕ್ತರು (ಮಾರುಕಟ್ಟೆ) ಹಾಗೂ ಪಾಲಿಕೆಯ ಅಧಿಕಾರಿಗಳ ಸಮ್ಮುಖದಲ್ಲಿ ಮೆ॥ಮಾನಸ ಕನ್ಸಲ್‌ಟೆಂಟ್ ರವರು Power Point presentation ಅನ್ನು ಪ್ರಸ್ತುತಪಡಿಸಿ, ಸದರಿ ಯೋಜನೆಗೆ ಲೋಕೋಪಯೋಗಿ ಇಲಾಖೆಯ 2009–10ನೇ ಸಾಲಿನ ದರಪಟ್ಟಿಯನ್ನು ಆಧರಿಸಿ ರೂ.300.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಯಲ್ಲಿ ವಿದ್ಯುತ್ಶಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಅನುವು ಮಾಡಲಾಗಿದೆ.

ಈ ಯೋಜನೆಯಲ್ಲಿ ಹಾಲಿ ಇರುವ ಹಳೇ ಮಾರುಕಟ್ಟೆ ಕಟ್ಟಡವನ್ನು ಒಡೆದು ಹಾಕಿ ಆಧುನಿಕ ರೀತಿಯ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲು ಉದ್ದೇಶಿಸಿದೆ. ಸದರಿ ಕಟ್ಟಡದಲ್ಲಿ, ನೆಲ ಮಹಡಿ, ನೆಲ ಅಂತಸ್ತು, ಒಂದನೇ ಅಂತಸ್ತು ಮತ್ತು ಎರಡನೇ ಅಂತಸ್ತುಗಳ 1723.05 ಚ.ಮೀ. ವಿಸ್ತೀರ್ಣದ ಕಟ್ಟಡವನ್ನು ನಿರ್ಮಿಸಲು ಅನುವು ಮಾಡಿಕೊಳ್ಳಲಾಗಿದೆ. ತಳಮಹಡಿಯ ವಿಸ್ತೀರ್ಣ 447.45 ಚ.ಮೀ. ಇದ್ದು, ಇಲ್ಲಿ 18 ಕಾರುಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರತಿ ಅಂತಸ್ತಿನಲ್ಲೂ ಲಿಫ್ಟ್, ಮೆಟ್ಟಿಲುಗಳು ಹಾಗೂ ಶೌಚಾಲಯಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಸದರಿ ವಾಣಿಜ್ಯ ಸಂಕೀರ್ಣದ ಕಟ್ಟಡದ ವಿಸ್ತೀರ್ಣಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಮಹಡಿಗಳು | ನಿರ್ಮಿತ ಕಟ್ಟಡ ವಿಸ್ತೀರ್ಣ ಚ.ಮೀ.ಗಳಲ್ಲಿ | ಪ್ರಸ್ತಾವನೆ | ಷರಾ |
|---|---|---|---|---|
| 1. | ತಳಮಹಡಿ | 447.45 | ಕಾರು ನಿಲುಗಡೆ – 18 | ಹೊಸ ಸೌಲಭ್ಯ |
| 2. | ನೆಲಮಹಡಿ | 425.20 | ಮಳಿಗೆಗಳು | ಪುನರ್ ವಸತಿ |
| 3. | 1ನೇ ಮಹಡಿ | 425.20 | ಕಛೇರಿ | ಹೊಸ ಸೌಲಭ್ಯ |
| 4. | 2ನೇ ಮಹಡಿ | 425.20 | ಕಛೇರಿ | ಹೊಸ ಸೌಲಭ್ಯ |
| ಒಟ್ಟು ನಿರ್ಮಿತ ಕಟ್ಟಡ ವಿಸ್ತೀರ್ಣ 1723.05 ಚ.ಮೀ | | | | |

ಕಟ್ಟಡ ಉಪವಿಧಿಗಳು ಹಾಗೂ ವಲಯ ನಿಯಮಾವಳಿಯಂತೆ ವಿವರಗಳು:

| | | |
|---|---|---|
| ನಿವೇಶನದ ವಿಸ್ತೀರ್ಣ | : | 693.08 ಚದರ ಮೀಟರ್‌ಗಳಲ್ಲಿ |
| ವಲಯ ನಿಯಮಾವಳಿಯಂತೆ ಅನುಪಾತ | : | 1.75 |
| ಉಪಯೋಗಿಸಿರುವ ಅನುಪಾತ | : | 1.75 |
| ವಲಯ ನಿಯಮಾವಳಿಯಂತೆ ಕಟ್ಟಡದ ಆವರಿಸುವಿಕೆ | : | 60% |
| ಉಪಯೋಗಿಸಿರುವ ಕಟ್ಟಡದ ಆವರಿಸುವಿಕೆ | : | 55% |

ಸದರಿ ವಾಣಿಜ್ಯ ಸಂಕೀರ್ಣ ನಿರ್ಮಾಣದಿಂದ ಸುಮಾರು 8 (ಎಂಟು) ವರ್ಷಗಳಲ್ಲಿ ವೆಚ್ಚಗಳನ್ನು ಹೊರತುಪಡಿಸಿ, ಪಾಲಿಕೆಗೆ ನಿವ್ವಳ ಆದಾಯ ಸುಮಾರು ರೂ.334.87 ಲಕ್ಷಗಳು ಬರಬಹುದೆಂದು ಅಂದಾಜಿಸಲಾಗಿದ್ದು, ಇದರಿಂದಾಗಿ ನಿರ್ಮಾಣದ ವೆಚ್ಚವು, ಮರು ಪಾವತಿಯಾಗಬಹುದೆಂದು ಅಭಿಪ್ರಾಯಿಸಲಾಗಿದೆ. ಸದರಿ ಕಾಮಗಾರಿಗೆ 2009–10 ನೇ ಸಾಲಿನ ಆಯವ್ಯಯದಲ್ಲಿ ರೂ.20/- ಲಕ್ಷಗಳ ಅನುದಾನವು ಲಭ್ಯವಿರುತ್ತದೆ. ಹಾಗೂ ಕಾಮಗಾರಿಯ ಮೊತ್ತ ರೂ.300 ಲಕ್ಷಗಳನ್ನು 2010–11ನೇ ಸಾಲಿನ ಆಯವ್ಯಯದಲ್ಲಿ ರೂ.150 ಲಕ್ಷಗಳನ್ನು ಹಾಗೂ 2011–12ನೇ ಸಾಲಿನ ಆಯವ್ಯಯದಲ್ಲಿ ರೂ.150 ಲಕ್ಷಗಳ ಅನುದಾನವನ್ನು ಅಳವಡಿಸಲಾಗುವುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಲಕ್ಕಸಂದ್ರ ಮಾರುಕಟ್ಟೆಯ ಪುನರ್ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ.300 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 08/01/2010 ರ ಟಿಪ್ಪಣಿ.

**ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು**

**ನಿರ್ಣಯ:- ದಿನಾಂಕ:08-01-2010 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು.**

**ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು**

**ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.**

**ನಿರ್ಣಯ:- ದಿನಾಂಕ:08-01-2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

(ಎಸ್.ಕೆ.ನಟರಾಜು)
ಮಹಾಪೌರರು